(ಇಂದು ದಿನಾಂಕ:13-11-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ: ಅರ್ಜಿದಾರ ಪರ ವಕೀಲರಿಂದ :-**

ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ.

ನಾನು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.1 | ಪ್ರಥಮ ವರ್ತಮಾನ ವರದಿಯ ದೃಢಿಕೃತ ನಕಲು |
| ನಿ.ಪಿ.2 | ದೂರಿನ ಧೃಡಿಕೃತ ನಕಲು |
| ನಿ.ಪಿ.3 | ಅಂತಿಮ ವರದಿಯ ಧೃಡಿಕೃತ ನಕಲು |
| ನಿ.ಪಿ.4 | ಶವ ತನಿಖಾ ವರದಿಯ ಧೃಡಿಕೃತ ನಕಲು |
| ನಿ.ಪಿ.5 | ಗುನ್ನಾ ಸ್ಥಳ ಪಂಚನಾಮೆಯ ಧೃಡಿಕೃತ ನಕಲು |
| ನಿ.ಪಿ.6 | ಶವ ಪರೀಕ್ಷಾ ವರದಿಯ ಧೃಡಿಕೃತ ನಕಲು |
| ನಿ.ಪಿ.7 | ವಾಹನ ತಪಾಸಣ ವರದಿಯ ಧೃಡಿಕೃತ ನಕಲು |
| ನಿ.ಪಿ.8 | ಹೆಚ್ಚುವರಿ ಹೇಳಿಕೆ ಮತ್ತು ಹೇಳಿಕೆಗಳ ಧೃಡಿಕೃತ ನಕಲುಗಳು |
| ನಿ.ಪಿ.9 | ಎಫ್ ಎಸ್ ಎಲ್ ವರದಿಯ ದೃಢೀಕೃತ ನಕಲು |
| ನಿ.ಪಿ.10 | ಚಾಲನಾ ಪರವಾನಿಗೆಯ ದೃಢೀಕೃತ ನಕಲು |

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಯು ಕೆ ವಾಯ್ ವಕೀಲರಿಂದ.**

1. ಅರ್ಜಿದಾರ ನಂ.2 ಮತ್ತು 3 ನಮ್ಮ ಅತ್ತೆ ಮಾವ. ಅವರು ವಯಸ್ಸಾದ ಕಾರಣ ಮನೆಯಲ್ಲಿ ಇರುತ್ತಾರೆ. ನನ್ನ ಅತ್ತೆ ಮಾವಂದಿರಿಗೆ ಜಮೀನು ಇಲ್ಲ. ನನ್ನ ಗಂಡ ಮೃತ ಗಿರೀಶ್ ಚಾಲಕ ಕೆಲಸ ಮಾಡುತ್ತಿದ್ದರು. ನನ್ನ ಗಂಡ ಮೃತ ಗಿರೀಶ್ ಇವರು ಚಾಲಕ ಎಂದು ತೋರಿಸಲು ನಾನು ಯಾವುದೇ ಪರವಾನಿಗೆ ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ. ಕಾರ ಮಾಲೀಕರಿಗೆ ಮತ್ತು ವಿಮಾ ಕಂಪನಿಯವರನ್ನು ನಾನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಅಪಘಾತವು ಮಾರುತಿ ಸ್ವಿಫ್ಟ್ ಕಾರ ಸಂಖ್ಯೆ ಕೆಎ 37 ಎನ್ 0042

ನೇದ್ದರ ಚಾಲಕನ ಅಜಾಗ್ರಕತೆ ಮತ್ತು ವೇಗವಾಗಿ ಚಲಾಯಿಸಿಕೊಂಡು ಬಂದಿದ್ದರಿಂದ ಕಾರ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬಸ್ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಗಂಡ ಮೃತ ಗಿರೀಶ್ ರವರು ಬೇರೆ ಯಂತ್ರಗಳಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದರು. ಅವರು ಸ್ವಂತ ಭತ್ತ ಕಟಾವು ಮಾಡುವ ಯಂತ್ರ ನನ್ನ ಗಂಡ ಮೃತ ಗಿರೀಶ್ ರವರಿಗೆ ಇರುವುದಿಲ್ಲ. ಭತ್ತ ಕಟಾವು ಮಾಡುವುದು ವರ್ಷಕ್ಕೆ 2 ಬಾರಿ 15 ದಿನಗಳವರೆಗೆ ಮಾತ್ರ ಇರುತ್ತದೆ ಎಂದರೆ ಸರಿ.

2. ಭತ್ತ ಕಟಾವು ಚಾಲಕನ ಕೆಲಸ ಮಾಡಿ ಪ್ರತಿ ತಿಂಗಳು ರೂ.25,000/- ದುಡಿಯುತ್ತಿದ್ದರು ಮತ್ತು ಒಕ್ಕಲುತನದಿಂದ ವರ್ಷಕ್ಕೆ ರೂ.3 ಲಕ್ಷ ಆದಾಯ ಇತ್ತು ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ಮಾರುತಿ ಸ್ವಿಪ್ಟ್ ಕಾರ ಸಂಖ್ಯೆ ಕೆಎ 37 ಎನ್ 0042 ನೇದ್ದರ ಚಾಲಕನ ತಪ್ಪಿನಿಂದ ಅಪಘಾತ ಆಗಿದ್ದರಿಂದ ಎದುರುದಾರ ಸಾರಿಗೆ ಸಂಸ್ಥೆ ಪರಿಹಾರ ಕೊಡಲು ಹೊಣೆಗಾರರು ಅಲ್ಲ ಎಂದರೆ ಸರಿಯಲ್ಲ. ಮೃತ ನನ್ನ ಗಂಡ ಗಿರೀಶ್ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅತ್ತೆ ಮಾವಂದಿರು ಏನೂ ಕೆಲಸ ಮಾಡುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲಾ ಅಂಶಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ಕಾರ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಕಾರ ಚಾಲಕನ ತಪ್ಪಿನಿಂದ ಅಪಘಾತವಾಗಿದ್ದು ಗೊತ್ತಿದ್ದರೂ ಕೂಡಾ ಎದುರುದಾರರ ವಿರುದ್ದ ಸುಳ್ಳು ಅರ್ಜಿ ಸಲ್ಲಿಸಿ ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ದಿನ ಬಸ್ ಚಾಲಕನು ರಸ್ತೆ ನಿಯಮಗಳನ್ನು ಪಾಲಿಸುತ್ತಾ ನಿಧಾನವಾಗಿ ಜಾಗ್ರಕತೆಯಿಂದ ಬಸ್ ಚಾಲನೆ ಮಾಡುತ್ತಿದ್ದ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು